ಅಸಲು ದಾವಾ ನಂ.975/2021
ಪಿ.ಡಬ್ಲೂಃ 01

ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **30-01-2024**

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ.S.S.SU ರವರಿಂದಃ

7. ನನ್ನ ಆಸ್ತಿಯ ಉತ್ತರ ದಿಕ್ಕಿಗೆ ಪ್ರತಿವಾದಿಯರ ಆಸ್ತಿ ಇರುತ್ತದೆ. ನನ್ನ ಆಸ್ತಿಯ ಪೂರ್ವಕ್ಕೆ ಹಣಮಂತ ಸತ್ಯಪ್ಪ ದಳವಾಯಿ ರವರ ಆಸ್ತಿ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ 1 ನೇ ಪ್ರತಿವಾದಿ ರವರ ಆಸ್ತಿ, ದಕ್ಷಿಣಕ್ಕೆ ಗೋಪಾಲ ಕಾಂಬಳೆ ರವರ ಜಮೀನು ಆಸ್ತಿ. ರಡ್ಡೇರಹಟ್ಟಿ ಗ್ರಾಮದಲ್ಲಿ ನಮ್ಮ ಹಿರಿಯರಿಂದ ಬಂದ ಆಸ್ತಿ ಸಹ ಇರುತ್ತದೆ. ನಮ್ಮ ಹಿರಿಯರ ಜಮೀನು ಒಟ್ಟು 3 ಎಕರೆ 19 ಗುಂಟೆ ಇತ್ತು, ಈಗ ಅದರಲ್ಲಿ ನನಗೆ 1 ಎಕರೆ ಜಮೀನು ಬಂದಿದೆ. ಸದರಿ ಜಮೀನಿನ ಮೇಲೆ 1 ನೇ ಪ್ರತಿವಾದಿ ಪಾಲು ವಿಭಾಗ ಬೇಡಿ ದಾವೆ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯ ನಂಬರ 1055/2021 ಇದ್ದು, ಅದು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ.

8. ಪಂಚಾಯತಿಯವರು 1 ನೇ ಪ್ರತಿವಾದಿಗೆ ಸಹ ಮನೆ ಕಟ್ಟಲು ಜಾಗ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪಂಚಾಯತಿಯವರು 1 ನೇ ಪ್ರತಿವಾದಿಗೆ ಮನೆ ಕಟ್ಟಿಕೊಳ್ಳಲು ಪೂರ್ವ-ಪಶ್ಚಿಮ 55 ಫೂಟ, ಉತ್ತರ-ದಕ್ಷಿಣ 38 ಫೂಟ ಕ್ಷೇತ್ರದ ಜಾಗೆಯನ್ನು ಕೊಟ್ಟಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಆಸ್ತಿ ನಂಬರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯರು ಪೂರ್ವ-ಪಶ್ಚಿಮ 38 ಫೂಟ, ಉತ್ತರ-ದಕ್ಷಿಣ 22 ಫೂಟ ನಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ, ಉಳಿದ ಕ್ಷೇತ್ರ ಖುಲ್ಲಾ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಪೂರ್ವಕ್ಕೆ 17 ಫೂಟ, ಪಶ್ಚಿಮಕ್ಕೆ 10 ಫೂಟ, ಉತ್ತರಕ್ಕೆ 12 ಫೂಟ, ದಕ್ಷಿಣಕ್ಕೆ 3.5 ಫೂಟ ಜಾಗವನ್ನು ಬಿಟ್ಟಿದ್ದಾರೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ 3.5 ಫೂಟ ಜಾಗೆಯನ್ನು ಬಿಟ್ಟುರುವುದಿಲ್ಲ ಸುಳ್ಳು ಹೇಳುತ್ತಿದ್ದಾರೆ ಎನ್ನುತ್ತಾರೆ. ದಕ್ಷಿಣಕ್ಕೆ 3.05 ಫೂಟ ಜಾಗ ಬಿಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಸದರಿ ನಿಪಿ-11 ಠರಾವ್ ಸನ್-2004 ರಲ್ಲಿ ಆಗಿದೆ. ಅದರ ತಿಂಗಳು, ದಿನಾಂಕ, ವರ್ಷ ಹೇಳಲು ಬರುವುದಿಲ್ಲ. ಸದರಿ ಠರಾವ ಆದ ವರ್ಷ ಶ್ರೀಶೈಲ ಹಣಮಂತ ಜಗದಾಳ ರವರು ಅಧ್ಯಕ್ಷರು ಇದ್ದರು. ಸದರಿ ನಿಪಿ-11 ರಲ್ಲಿ ಆಸ್ತಿಯ ಚಕಬಂದಿ ಬರೆದಿಲ್ಲ. ಸದರಿ ಠರಾವಿನಲ್ಲಿ ಚಕಬಂದಿ ಬರೆಸಲು ನನಗೆ ಯಾವದೇ ತೊಂದರೆ ಇರಲಿಲ್ಲ. ಸದರಿ ಠರಾವಿನ ಕುರಿತು ಪಂಚಾಯತಿಗೆ ಅರ್ಜಿ ನಾನೇ ಕೊಟ್ಟಿದ್ದೆ. ಸದರಿ ಅರ್ಜಿಯಲಿ ಆಸ್ತಿಯ ವಿಸ್ತೀರ್ಣ ಬರೆಸಿರುವುದಿಲ್ಲ. ಪಂಚಾಯತಿ ಆಸ್ತಿ ನಂ.738 ಇಷ್ಟೇ ವಿಸ್ತೀರ್ಣದ್ದು ಇದೆ ಅಂತ ಪಂಚಾಯತಿಯವರು ದಾಖಲೆ ನೀಡಿದ್ದಾರಾ ಎಂದರೆ ಸಾಕ್ಷಿಯು ಕ್ಷೇತ್ರದ ಬಗ್ಗೆ ದಾಖಲೆ ನೀಡಿಲ್ಲ, ಠರಾವ ಮಾತ್ರ ನೀಡಿದ್ದಾರೆ ಎನ್ನುತ್ತಾರೆ. ಸದರಿ ಠರಾವಿನಲ್ಲಿ ಪಂಚಯತಿ ಆಸ್ತಿ ನಂ.738 ರ ವಿಸ್ತೀರ್ಣ ಬರೆದಿದೇಯಾ ಎಂದರೆ ಸಾಕ್ಷಿಯು ನಾನು ಶಾಲೆ ಕಲಿತಿಲ್ಲ, ನನಗೆ ಅಷ್ಟೋಂದು

ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಆಸ್ತಿಗೆ ಪಂಚಾಯತಿಯವರು ಇ-ಸ್ವತ್ತ ನ್ನು ನೀಡಿದ್ದಾರಾ ಎಂದರೆ ಸಾಕ್ಷಿಯು ನಮಗೂ ನೀಡಿರುವುದಿಲ್ಲ ಮತ್ತು ಬೇರೆಯವರಿಗೂ ಸಹ ನೀಡಿರುವುದಿಲ್ಲ ಎನ್ನುತ್ತಾರೆ.

10. ಶ್ರೀಶೈಲ ಹಣಮಂತ ಜಗದಾಳ ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ರಡ್ಡೇರಹಟ್ಟಿ ಗ್ರಾಮದಲ್ಲಿ ನನಗೆ ಸೇರಿದ ಜಮೀನು ಇದ್ದರೂ ಸಹ ನನಗೆ ಯಾವದೇ ಜಮೀನು ಇರುವುದಿಲ್ಲ ಅಂತ ಸುಳ್ಳು ಹೇಳಿ ಕೊಟ್ಟ ಠರಾವನ್ನು ಮಂಜೂರು ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆಸ್ತಿ ನಂ.738 ಇದು ಪಂಚಾಯತಿ ಇರುತ್ತದೆ ಎಂದರೆ ಸಾಕ್ಷಿಯು ಹೌದು ನನಗೆ ಪಂಚಾಯತಿಯವರೇ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ಪಂಚಾಯತಿಯವರಿಗೆ ಆಸ್ತಿಯನ್ನು ಠರಾವಿನ ಮೂಲಕ ಕೊಡುವ ಯಾವದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿ ನಂ.738 ಕ್ಕೆ ನಾನು ಮಾಲೀಕನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಯಾವದೇ ತೊಂದರೆ ನೀಡಿಲ್ಲವಾದರೂ ಅವರ ಮೇಲೆ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಮ್ಎಫಸಿ ನ್ಯಾಯಾಲಯ,
ಅಥಣಿ.